

# ಆತಂಕದಲ್ಲಿ ಚಂದನಿಕಾ

ಅವತ್ತು ಬುಧವಾರ, ಅಷ್ಟೊಂದು ಗದ್ದಲವಿರುವುದಿಲ್ಲ. ದೇವಿಗೆ ಬಾಗಿನ ಅರ್ಪಿಸಿ ಪ್ರಸಾದ ತೆಗೆದುಕೊಂಡು, ಪ್ರದಕ್ಷಿಣೆ ಮಾಡಿದರು. ಗರ್ಭಗುಡಿಯ ಸುತ್ತ ಪ್ರಾಂಗಣವಿತ್ತು. ಅದನ್ನು ನಾಕು ದಿಕ್ಕಿಂದ ಆವರಿಸಿದ ಪಡಸಾಲೆಯಲ್ಲಿ, ಜನರಿಲ್ಲದ ಮೂಲೆಯ ಒಂದು ಕಟ್ಟೆಯ ಮೇಲೆ ಕುಳಿತರು. ತನ್ನ ಮುಖದಲ್ಲಿಯೆ ಕೀಲಿಸಿದ ಅವಳ ಕಣ್ಣುಗಳಲ್ಲಿ ಭಾವತೀವ್ರತೆ ಕಂಡವ 'ಅಂತದೇನಾಯ್ತು ಚಂದನಿಕಾ... ಹೇಳಬಾರದ?' ತಗ್ಗಿದ ಸ್ವರದಲ್ಲಿ ಕೇಳುತ್ತ ಅವಳ ಮುಂಗೈ ಮೇಲೆ ತನ್ನ ಹಸ್ತವನ್ನಿಟ್ಟ. ಅವನ ಮುಖದಿಂದ ದೃಷ್ಟಿಯನ್ನು ಕೆಳಗಿಳಿಸಿದವಳು 'ಯಾಕೋ ಈ ಕಥೆಯನ್ನು ನಿಮಗೆ ಹೇಳದೆ ನನ್ನ ಆತಂಕದಿಂದ ನಂಗೆ ಬಿಡುಗಡೆಯಾಗದು ಅನಿಸ್ತಿದೆ. ಯೋಗ್ಯವಾದ ಸ್ಥಳಕ್ಕೂ ಬಂದಿದೀವಿ...' ಅಂದಳು. ಅವಳ ದನಿ ಕಂಪಿಸುತ್ತಿತ್ತು. ಒಂದು ಕ್ಷಣ ಮೌನದ ನಂತರ ಶುರು ಮಾಡಿದಳು.

14

ಆ ಊರು ಅಂಕೋಲೆ ತಾಲೂಕಿನಲ್ಲಿದೆ. ಆ ಕಾಲದಲ್ಲಿ ಮಂಡಲಾಧೀಶನೊಬ್ಬನ ಆಳ್ವಿಕೆಗೆ ಒಳಪಟ್ಟ ಊರಿರುವ ಆಯಕಟ್ಟಾದ ಜಾಗೆಗೆ ರಾಜಕೀಯ ಮಹತ್ವವಿತ್ತು. ಹೇರೆತ್ತುಗಳು, ಕತ್ತೆ, ಕುದುರೆಗಳ ಮೇಲೆ ಸರಕು ಸಾಗಣೆ ಮಾಡುವ ವ್ಯಾಪಾರಿಗಳು, ಪ್ರಯಾಣಿಕರು ಯಾತ್ರಿಗಳಿಂದಾಗಿ ಅಲ್ಲಿಂದ ಹಾದುಹೋಗುವ ಹೆದ್ದಾರಿಗೆ ಬಹಳ ಪ್ರಾಮುಖ್ಯತೆಯಿತ್ತು. ಮಂಡಲಾಧೀಶ ಅಲ್ಲಿದ್ದ ಪುರಾತನ ಶಿವ ದೇವಾಲಯವನ್ನು ಪುನಃ ನಿರ್ಮಿಸಿ, ಅದಕ್ಕೆ ಯಥೇಚ್ಛ ಉಂಬಳಿ ಬಿಟ್ಟಿದ್ದ. ವರ್ಷಕ್ಕೊಮ್ಮೆ ವಿಜೃಂಭಣೆಯಿಂದ ರಥೋತ್ಸವವಾಗುತ್ತಿತ್ತು. ಆಗಮ ಪ್ರಕಾರ ನಿರ್ಮಿಸಿದ ದೇವಾಲಯದಲ್ಲಿ ನಿತ್ಯ ತ್ರಿಕಾಲಪೂಜೆ ನಡೆಯುತ್ತಿತ್ತು. ದೇವಾಲಯದ ಸುತ್ತ ಪ್ರಾಂಗಣ.